ಲಕ್ಷ ರೂ. ಆಗುತ್ತದೋ ಏನೋ ಗೊತ್ತಿಲ್ಲ. Defreezer ತಂದು store room, godown ನಲ್ಲಿ ಹಾಕಿದ್ದಾರೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ವಿನಂತಿ ಮಾಡುತ್ತೇನೆ.

ಶ್ರೀ ಯು. ಟಿ. ಖಾದರ: ಮನವಿ ಪರಿಶೀಲಿಸುತ್ತೇನೆ.

ಅಧ್ಯಕ್ಷರು: O.K.

ವೈದ್ಯರುಗಳ ಬಗ್ಗೆ ಮಾಹಿತಿ:

131 (872); ಶ್ರೀ ಸಿದ್ದು ಬಿ. ನ್ಯಾಮಗೌಡ (ಜಮಖಂಡಿ)

(ಅ) ಜಮಖಂಡಿ ತಾಲ್ಲೂಕಿನಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಗೆ ಮಂಜೂರಾಗಿರುವ ವೈದ್ಯರುಗಳ ಸಂಖ್ಯೆ ಎಷ್ಟು; ಮತ್ತು ಕರ್ತವ್ಯ ನಿರ್ವಹಿಸುತ್ತಿರುವ ವೈದ್ಯರುಗಳ ಸಂಖ್ಯೆ ಎಷ್ಟು;

(ಆ) ಸರ್ಕಾರಿ ಆಸ್ಪತ್ರೆಗಳಲ್ಲಿ ವೈದ್ಯರುಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮವೇನು;

(ಇ) ಜಮಖಂಡಿ ಸರ್ಕಾರಿ ಆಸ್ಪತ್ರೆಯಲ್ಲಿ ಹಾಸಿಗೆಯ ಸಂಖ್ಯೆ ಹೆಚ್ಚು ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ ಹಾಗೂ ಸದರಿ ಆಸ್ಪತ್ರೆಯಲ್ಲಿ ರಕ್ತ ಸಂಗ್ರಹಣಾ ಘಟಕ (ಬ್ಲಡ್ ಬ್ಯಾಂಕ್) ಇಲ್ಲದೇ ಇರುವುದರಿಂದ ರೋಗಿಗಳಿಗೆ ತುಂಬಾ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಈ) ಹಾಗಿದ್ದಲ್ಲಿ, ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಯು. ಟಿ. ಖಾದರ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

(ಅ) ಜಮಖಂಡಿ ತಾಲ್ಲೂಕಿನಲ್ಲಿ ಒಂದು ಸಾರ್ವಜನಿಕ ಆಸ್ಪತ್ರೆ, ಒಂದು ಸಮುದಾಯ ಆರೋಗ್ಯ ಕೇಂದ್ರ, 9 ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಒಂದು ಎನ್‌ಎಲ್‌ಸಿಸಿ ಕೇಂದ್ರ ಹಾಗೂ ಇರುತ್ತವೆ. ಈ ಎಲ್ಲಾ ಸರ್ಕಾರಿ

ಆಸ್ಪತ್ರೆಗಳಿಗೆ ಮಂಜೂರಾಗಿರುವ ವೈದ್ಯ/ತಜ್ಞರುಗಳ ಸಂಖ್ಯೆ ವಿವರ ಈ ಕೆಳಕಂಡಂತಿದೆ.

ಆಸ್ಪತ್ರೆ	ಮಂಜೂರು	ಕಾರ್ಯನಿರತ	ಖಾಲಿ
ಸಾರ್ವಜನಿಕ ಆಸ್ಪತ್ರೆ	13	06	07
ಸಮುದಾಯ ಆರೋಗ್ಯ ಕೇಂದ್ರ	05	03	02
ಪ್ರಾಥಮಿಕ ಆರೋಗ್ಯ ಕೇಂದ್ರ	09	09	00
ಎನ್‌ಎಲ್‌ಸಿಸಿ	01	00	01

(ಆ) ಬಂದಿದೆ. ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ತೆಗೆದು ಕೊಂಡ ಕ್ರಮದ ಬಗ್ಗೆ ಅನುಬಂಧ–1ರಲ್ಲಿ ನೀಡಲಾಗಿದೆ.

(ಇ) ಹಾಸಿಗೆಗಳ ಸಂಖ್ಯೆ ಹೆಚ್ಚು ಮಾಡುವ ಯೋಜನೆ ಸರ್ಕಾರದ ಮುಂದಿಲ್ಲ. ಸರ್ಕಾರದ ಸದರಿ ಆಸ್ಪತ್ರೆಯಲ್ಲಿ ರಕ್ತಸಂಗ್ರಹಣಾ ಘಟಕ (ಬ್ಲಡ್ ಬ್ಯಾಂಕ್) ಮಂಜೂರಾಗಿರುತ್ತದೆ. ಆದರೆ ಸದರಿ ರಕ್ತ ಸಂಗ್ರಹಣಾ ಘಟಕಕ್ಕೆ ತಜ್ಞ ವೈದ್ಯರು ಮತ್ತು ನುರಿತ ಸಿಬ್ಬಂದಿಗಳ ಕೊರತೆಯಿಂದ ಇನ್ನೂ ಪ್ರಾರಂಭವಾಗಿರುವುದಿಲ್ಲ.

(ಈ) ಇಲಾಖೆಯಲ್ಲಿ ತಜ್ಞ ವೈದ್ಯರ ಕೊರತೆ ಇರುತ್ತದೆ. ಈ ಹುದ್ದೆಗಳನ್ನು ಕರ್ನಾಟಕ ಲೋಕ ಸೇವಾ ಆಯೋಗದ ಮೂಲಕ ಭರ್ತಿ ಮಾಡಲು ಸದ್ಯದಲ್ಲಿ ಪ್ರಸ್ತಾವನೆ ಸಲ್ಲಿಸಲಾಗುವುದು.

ಅನುಬಂಧ – 1

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 131 (872)

ಜಮಖಂಡಿ ತಾಲೂಕಿನ ಆರೋಗ್ಯ ಸಂಸ್ಥೆಗಳಲ್ಲಿ ಸಿಬ್ಬಂದಿಗಳ ಮಂಜೂರಿ ಕಾರ್ಯನಿರತ ಹಾಗೂ ಖಾಲಿ ಹುದ್ದೆಗಳ ವಿವರ ದಿನಾಂಕ: 01.06.2014.

ಕ್ರ. ಸಂ.	ಹುದ್ದೆ	ಮ	ಕಾ	ಖಾ
1	ತಜ್ಞ ವೈದ್ಯಾಧಿಕಾರಿಗಳು	18	9	9
2	ವೈದ್ಯಾಧಿಕಾರಿಗಳು	13	7	6
3	ತಾಲ್ಲೂಕು ಆಡಳಿತಾಧಿಕಾರಿಗಳು	1	0	1
4	ಸಹಾಯಕ ಆಡಳಿತಾಧಿಕಾರಿಗಳು	1	1	0
5	ಕಚೇರಿ ಅಧಿಕ್ಷಕರು	1	1	0
6	ಪ್ರ. ದ. ಸ.	11	7	4
7	ದ್ವಿ. ದ. ಸ.	13	10	3
8	ಟೈಪಿಸ್ಟ್	0	0	0
9	ಶುಶ್ರೋಷಾಧಿಕ್ಷಕರು ದರ್ಜೆ–1	1	1	0
10	ಶುಶ್ರೋಷಾಧಿಕ್ಷಕರು ದರ್ಜೆ–2	1	0	1
11	ಹಿರಿಯ ಶುಶ್ರೂಷಕಿ	1	0	1
12	ಕ್ಲರ್ಕ–ಕಂ–ಟೈಪಿಸ್ಟ್	1	0	1
13	ಹಿರಿಯ ಫಾರ್ಮಾಸಿಸ್ಟ್	3	3	0
14	ಕಿರಯ ಫಾರ್ಮಾಸಿಸ್ಟ್	11	9	2
15	ಶುಶ್ರೋಷಕರು	31	26	5
16	ಕಿರಿಯ ಆರೋಗ್ಯ ಸಹಾಯಕ (ಪು)	41	25	16
17	ಕಿರಿಯ ಆರೋಗ್ಯ ಸಹಾಯಕಿ (ಮ)	50	41	9
18	ಕಿರಿಯ ವೈದೇತರ ಮೇಲ್ವಿಚಾರಕ	2	0	2

19	ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ	3	3	0
20	ಪ್ಯಾರ ಮೆಡಿಕಲ್ ವರ್ಕರ	2	0	2
21	ಹಿರಿಯ ಆರೋಗ್ಯ ಸಹಾಯಕ (ಪು)	8	5	3
22	ಹಿರಿಯ ಆರೋಗ್ಯ ಸಹಾಯಕಿ (ಮ)	8	4	4
23	ಹಿರಿಯ ವೈದೇತರ ಮೇಲ್ವಿಚಾರಕ	2	1	1
24	ಹಿ. ಪ್ರ. ತ.	2	2	0
25	ಕಿ. ಪ್ರ. ತ.	14	12	2
26	ಕ್ಷ–ಕಿರಣ ತ. ತಜ್ಞ	4	4	0
27	ನೇತ್ರ ಸಹಾಯಕ	4	4	0
28	ವಾಹನ ಚಾಲಕ	8	6	2
29	ಡಿ ವರ್ಗ	67	41	26
	ಒಟ್ಟು	**322**	**222**	**100**

ಶ್ರೀ ಸಿದ್ದು ಬಿ. ನ್ಯಾಮಗೌಡ: ಉತ್ತರವನ್ನು ಒದಗಿಸಿದ್ದಾರೆ. ನಮ್ಮ ಜಮಖಂಡಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಕಳೆದ 7–8 ವರ್ಷಗಳಿಂದ Doctors ಕೊರತೆ ಇತ್ತು. ಕೇವಲ ಅಲ್ಲಿ 13 ಜನ Doctors ಮಂಜೂರಾಗಿದ್ದರೂ ಕೂಡ ಇಲ್ಲಿಯವರೆಗೆ 3 ಜನ Doctors ಇದ್ದು. ಈಗ 2 ತಿಂಗಳಲ್ಲಿ ಮತ್ತೆ ಇಬ್ಬರು Doctors ಬಂದಿದ್ದಾರೆ. ಆದರೆ, ಇತರೆ ಸಿಬ್ಬಂದಿ ಕೂಡ ಬಹಳಷ್ಟು ಇಲ್ಲ. ಅಲ್ಲಿ ENT Doctors ಇಲ್ಲ. ಕಣ್ಣಿನ Doctors ಇಲ್ಲ. Physician ಇಲ್ಲ. Chief Medical Officer ಕಳೆದ 8–10 ವರ್ಷಗಳಿಂದ ಇಲ್ಲವೇ ಇಲ್ಲ. 3 ಜನ ಜನರಲ್ ಡಾಕ್ಟರ್ಸ್ ಅಂದರೆ MBBS Doctors ಅವರೂ ಇಲ್ಲ. ಜೊತೆಗೆ, ನಮ್ಮ ಇಡೀ ಜಮಖಂಡಿ ತಾಲ್ಲೂಕಿನಲ್ಲಿ 100 ಜನ staff ಕಡಿಮೆ ಇದ್ದಾರೆ. D-Group ನೌಕರರೂ ಕೂಡ ಇಲ್ಲ. ಯಾವಾಗ ನೇಮಿಸುತ್ತಾರೆ? ಡಾಕ್ಟರ್ಸ್

ಅವಶ್ಯಕತೆ ಬಹಳವಿದೆ. ಡಾಕ್ಟರ್ಸ್ ಇಲ್ಲದೆ ಹೋದರೆ ಇಷ್ಟೆಲ್ಲಾ ಸೌಕರ್ಯವುಳ್ಳ ದವಾಖಾನೆಗಳನ್ನು ಕಟ್ಟಿಸಿದರೆ ಪ್ರಯೋಜನವಾಗುವುದಿಲ್ಲ. ಖಾಲಿ ಹುದ್ದೆಗಳನ್ನು ಯಾವಾಗ ಭರ್ತಿ ಮಾಡುತ್ತೀರಿ? ತುಂಬಾ ತೊಂದರೆಯಿದೆ. ಇನ್ನೊಂದು ವಿಚಾರ ಏನೆಂದರೆ, ನಮ್ಮಲ್ಲಿ blood bank ಸುಮಾರು 2005–06ರಲ್ಲಿ ಮಂಜೂರಾಗಿದ್ದು ತತ್ಸಂಬಂದವಾದ ಎಲ್ಲಾ equipments ಎಲ್ಲಾ ಬಂದಿವೆ. ಇಷ್ಟಾದರೂ ಆ blood bank ಇನ್ನೂ ಪ್ರಾರಂಭವಾಗಿಲ್ಲ. ಅಲ್ಲಿ technician ಇಲ್ಲ. Radiologists ಇಲ್ಲ, ಅಲ್ಲಿ ಎಲ್ಲಾ equipments ಬಂದು ಸುಮಾರು 7–8 ವರ್ಷಗಳಾಗಿದೆ. Technician ಇಲ್ಲದ ಸಲುವಾಗಿ ಎಲ್ಲವೂ ಹಾಗೆಯೇ ಇದೆ. ಇದನ್ನು ಯಾವಾಗ ಪ್ರಾರಂಭಿಸುತ್ತೀರಿ? ಇದಕ್ಕೇನು ಮಾಡುತ್ತೀರಿ ಎಂದು ಕೇಳಬಯಸುತ್ತೇನೆ.

ಶ್ರೀ ಯು. ಟಿ. ಖಾದರ್: ರಾಜ್ಯದಲ್ಲಿ ವೈದ್ಯರ ಕೊರತೆಯ ಬಗ್ಗೆ ಈಗಾಗಲೇ ಒಂದು ವರ್ಷದಿಂದ ವಿಮರ್ಶೆ ಮಾಡಿ ಇದಕ್ಕೆ ಶಾಶ್ವತವಾದ ಪರಿಹಾರ ಕಾಣಬೇಕೆನ್ನುವ ಉದ್ದೇಶದಿಂದ ಮಾನ್ಯ ಮುಖ್ಯಮಂತ್ರಿಗಳು ಕೂಡ ಇದಕ್ಕೆ ಒಪ್ಪಿಗೆ ಕೊಟ್ಟಿದ್ದಾರೆ. ಮುಂದಿನ ಮೂರು ತಿಂಗಳಲ್ಲಿ ಯಾವ ರೀತಿಯಾಗಿ ನೇಮಿಸಿಕೊಳ್ಳಲು ಅವರಿಗೆ ಹೇಗೆ ಹೆಚ್ಚು ವೇತನ ಕೊಡಬೇಕೆಂದು ಯೋಚಿಸಿ, ಮುಂದಿನ ಮೂರು ತಿಂಗಳಲ್ಲಿ ಪ್ರಥಮವಾಗಿ ನೇಮಿಸಿಕೊಳ್ಳುವುದಕ್ಕೆ ನಾವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತೇವೆ. ಮುಂದಿನ ಎರಡು ವರ್ಷದಲ್ಲಿ ಈ ರಾಜ್ಯದಲ್ಲಿರುವ ಇಲಾಖೆಗೆ ಸಂಬಂಧಪಟ್ಟ ಎಲ್ಲಾ ಮಟ್ಟದ ಸಿಬ್ಬಂದಿಗಳನ್ನು ತುಂಬುವಂಥ ಕಾರ್ಯಕ್ರಮ ಹಮ್ಮಿಕೊಳ್ಳುವುದರ ಜೊತೆಗೆ blood bank ಗೆ ಸಂಬಂಧಪಟ್ಟಂತೆ radiologists ತಜ್ಞರ School of Surgeons ಎಂದು ನಮ್ಮ ರಾಜ್ಯದಲ್ಲಿ 2 ವರ್ಷದ fellowship course ನ್ನು ನಮ್ಮ ಸರ್ಕಾರಿ ವೈದ್ಯಾಧಿಕಾರಿಗಳಿಂದ ಪ್ರಾರಂಭ ಮಾಡುವುದರ ಮೂಲಕ ನಮ್ಮ ಇಲಾಖೆಯಲ್ಲೂ ಇವರ ಉಪಯೋಗ ಮಾಡಿಕೊಂಡು ಮುಂದಿನ ಎರಡು ವರ್ಷದೊಳಗಡೆ ಈಗಿರುವ ಸಮಸ್ಯೆ ಏನಿದೆ, ಅದನ್ನು ಬಗೆಹರಿಸುವ ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ.

ಶ್ರೀ ಎಸ್. ಸುರೇಶ್ ಕುಮಾರ್: ಅವರು ಇನ್ನೊಂದು ಮನೆಯಲ್ಲಿ ಬಹಳ ಖೇದದಿಂದ ನಾನು ಮೂರೇ ತಿಂಗಳು ಮಿನಿಸ್ಟರ್ ಆಗಿರುವುದು ಎನ್ನುವ ಮಾತನ್ನು ಹೇಳಿದ್ದಾರೆ. ಈಗ ಎರಡು ವರ್ಷಗಳಲ್ಲಿ ಮಾಡುತ್ತಾರೆಂದು ಹೇಳುತ್ತಿದ್ದಾರೆ ಇದು ಹೇಗೆ?

ಅಧ್ಯಕ್ಷರು: ಅದು ಎಲ್ಲಾ ಬೇಡ ಬಿಡಿ. ಸುಮ್ಮನಿರಿ.

ಶ್ರೀ ಯು. ಟಿ. ಖಾದರ: ನಾನು ಈ ಬಗ್ಗೆ ಖಂಡಿವಾಗಿ ಆ ತರಹ ಹೇಳಿಲ್ಲ. ನಮ್ಮ ಜೀವಕ್ಕೆ ಇವತ್ತು ಗ್ಯಾರಂಟಿ ಇಲ್ಲವೆಂದು ಹೇಳಿದೆ ಅಷ್ಟೆ.

ಅಧ್ಯಕ್ಷರು: ಸಾಕು ಬಿಡಿ. ಆಯಿತು ಸುಮ್ಮನಿರಿ. ಮುಂದಿನ ಪ್ರಶ್ನೆ ಮಾನ್ಯ ರಮೇಶ್ ಕುಮಾರ ರವರು ಕೇಳಿ.

ರಾಜ್ಯದಲ್ಲಿ ಶೋಷಿತ ವರ್ಗದ ಮಕ್ಕಳಿಗೆ ವಸತಿ ಶಾಲೆ

132 (1259); ಶ್ರೀ ರಮೇಶ್ ಕುಮಾರ್ ಕೆ. ಆರ್. (ಶ್ರೀನಿವಾಸಪುರ)

(ಅ) ಸಮಾಜದಲ್ಲಿನ ವಿವಿಧ ಶೋಷಿತ ವರ್ಗದ ಮಕ್ಕಳಿಗೆ ಶೈಕ್ಷಣಿಕವಾಗಿ ಮುಂದುವರೆಸಲು ಸರ್ಕಾರದ ವತಿಯಿಂತ ವಸತಿ ಶಾಲೆಗಳನ್ನು ಪ್ರಾರಂಭಿಸಲು ಸರ್ಕಾರವು ಉದ್ದೇಶಿಸಿದೆಯೇ;

(ಆ) ಅಂತಹ ಒಂದು ವಸತಿ ಶಾಲೆಯನ್ನು ಪ್ರಾರಂಭಿಸಲು ಇರಬೇಕಾದ ಕನಿಷ್ಠ ಅಗತ್ಯತೆಗಳೇನು;

(ಇ) ಈ ವರ್ಷದಲ್ಲಿ ರಾಜ್ಯದಲ್ಲಿ ಎಷ್ಟು ವಸತಿ ಶಾಲೆಗಳನ್ನು ತೆರೆಯಲು ಉದ್ದೇಶಿಸಿದೆ?

ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ)

(ಅ) ಸರ್ಕಾರವು 2014–15ನೇ ಸಾಲಿನ ಆಯವ್ಯಯ ಭಾಷಣದಲ್ಲಿ 100 ಹೊಸ ವಸತಿ ಶಾಲೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ